**ಪತ್ರಿಕಾ ಪ್ರಕಟಣೆ**

## ತೆರಿಗೆ ಆಡಳಿತವನ್ನು ದತ್ತಾಂಶ ಚಾಲಿತ ಹಾಗೂ ವೃತ್ತಿಪರಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯೊಂದಿಗೆ ಐಐಎಂಬಿಯ ಒಡಂಬಡಿಕೆ

**ಬೆಂಗಳೂರು:** ಭಾರತೀಯ ವ್ಯವಸ್ಥಾಪ್ರಬಂಧ ಸಂಸ್ಥೆ, ಬೆಂಗಳೂರು (ಐಐಎಂಬಿ) ಯು ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯೊಂದಿಗೆ 6ನೇ ಮಾರ್ಚ್ (ಬುಧವಾರ) 2019 ರಂದು ಎರಡು ಒಡಂಬಡಿಕೆಗಳಿಗೆ (MoU) ಸಹಿ ಮಾಡಿದ್ದು, ಒಂದು ಐಐಎಂಬಿ ಯಲ್ಲಿ ಮೂರು ವರ್ಷಗಳ ಅವಧಿಗೆ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳಿಗೆ ಸಾಮರ್ಥ್ಯ ಸಂವರ್ಧನಾ ಕಾರ್ಯಕ್ರಮಕ್ಕಾಗಿ ಹಾಗೂ ಮತ್ತೊಂದು ತೆರಿಗೆ ಆಡಳಿತದಲ್ಲಿ ವೃತ್ತಿಪರತೆಯನ್ನು ತರುವ ಉದ್ದೇಶದಿಂದ ಸರ್ಕಾರಕ್ಕೆ ಐಐಎಂಬಿಯ ಸಹಕಾರದೊಂದಿಗೆ ತೆರಿಗೆ ಆಡಳಿತವನ್ನು ಹೆಚ್ಚಿನ ದತ್ತಾಂಶ ಚಾಲಿತ (Data Driven) ಆಡಳಿತವನ್ನಾಗಿಸುವುದು.

ಕರ್ನಾಟಕ ಸರ್ಕಾರದ ಈ ದೃಷ್ಟಿಕೋನವು ತೆರಿಗೆ ಆಡಳಿತವನ್ನು ಸುಸ್ಥಿರಗೊಳಿಸಲು, ತೆರಿಗೆ ಆಡಳಿತದಲ್ಲಿ ವೃತ್ತಿಪರತೆಯನ್ನು ತರಲು ಹಾಗೂ ದತ್ತಾಂಶ ವಿಶ್ಲೇಷಣೆ (Big Data Analytics) ಗಾಗಿ ವಾಣಿಜ್ಯ ತೆರಿಗೆಗಳ ಇಲಾಖೆಗೆ ಒಂದು ಒಳ್ಳೆಯ ತಳಹದಿಯನ್ನು ಒದಗಿಸುವುದರೊಂದಿಗೆ ಸಂಶೋಧನಾ ವಿಶ್ಲೇಷಣೆಗಳ ಮೂಲಕ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ಐಐಎಂಬಿಯ ಸಹಕಾರದೊಂದಿಗೆ ಹೊಸ ದೃಷ್ಟಿಕೋನದೊಂದಿಗೆ ಮುಂದಡಿಯಿಡಲು ತೆಗೆದುಕೊಂಡ ಮಾದರಿ ಕ್ರಮ ಇದಾಗಿದೆ.

ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ರಾಷ್ಟ್ರದಲ್ಲಿ ಜಾರಿಗೊಂಡ ಹಿನ್ನೆಲೆಯಲ್ಲಿ, ಈ ಕಾಯ್ದೆಯು ತಂತ್ರಾಂಶ ಆಧಾರಿತವಾಗಿರುವುದರಿಂದ ಜಿಎಸ್‌ಟಿಯ ಬಗೆಗೆ ಹೊಸ ದೃಷ್ಟಿಕೋನವನ್ನು ಹೊಂದುವ ಅವಶ್ಯಕತೆ ಇದ್ದು, ಇದಕ್ಕಾಗಿ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳ ಕೌಶಲ್ಯವನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಇತ್ತು. ತಾಂತ್ರಿಕ ಅನ್ವೇಷಕಗಳ ಬಳಕೆ, ವ್ಯವಹಾರ ವಿಶ್ಲೇಷಣೆ, ದತ್ತಾಂಶ ಆಧಾರಿತ ನಿರ್ಧಾರ ಕೈಗೊಳ್ಳುವ ಕೌಶಲ್ಯ ಮತ್ತು ಇನ್ನೂ ಹೆಚ್ಚಿನ ವೃತ್ತಿಪರ ತೆರಿಗೆ ಆಡಳಿತವು ತಕ್ಷಣದ ಅವಶ್ಯಕತೆಯಾಗಿತ್ತು.

ಐಐಎಂಬಿಯು ರಾಷ್ಟ್ರದಲ್ಲಿಯೇ ಶ್ರೇಷ್ಠ ಸಂಸ್ಥೆಯಾಗಿದ್ದು, ಆಡಳಿತದ ನಿರ್ಣಾಯಕ ಘಟ್ಟಗಳಲ್ಲಿ ಅಧಿಕಾರಿಗಳ ಕೌಶಲ್ಯವನ್ನು ವೃದ್ಧಿಸಲು ಬೇಕಾದ ಆಡಳಿತ ಅಭಿವೃದ್ಧಿ ಕೌಶಲ್ಯ, ದತ್ತಾಂಶ ವಿಶ್ಲೇಷಣೆ, ರಾಜಸ್ವದ ಅಂದಾಜಿಸುವಿಕೆ, ಅಭೇದ್ಯ ತನಿಖೆಗಳ ತಯಾರಿಕೆ, ಮುನಶ್ಚೇತನ, ಬದಲಾವಣೆ, ಮೊದಲಾದವುಗಳ ನಿರ್ವಹಣೆ ಮಾಡುವುದನ್ನು ಹಾಗೂ ಕಲಿಯುವಿಕೆಯನ್ನು ರೂಪಿಸಲು ವೃತ್ತಿಪರವಾಗಿ ಸಜ್ಜಾಗಿರುವ ಸಂಸ್ಥೆಯಾದುದರಿಂದ, ಮೇ 2018 ರಲ್ಲಿ ಕರ್ನಾಟಕ ಸರ್ಕಾರದ ಸಮ್ಮತಿಯೊಂದಿಗೆ ವಾಣಿಜ್ಯ ತೆರಿಗೆಗಳ ಇಲಾಖೆಯು ಐಐಎಂಬಿಯನ್ನು ಕೋರಿರುತ್ತದೆ.

ಆನಂತರ, ಐಐಎಂಬಿಯು 123 ಹಿರಿಯ ಅಧಿಕಾರಿಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ತರಬೇತಿಯನ್ನು ಹಮ್ಮಿಕೊಂಡಿರುತ್ತದೆ. ಐಐಎಂಬಿಯ ವೃತ್ತಿಪರ ಭೋದನಾ ವರ್ಗವು ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳಿಗೆ ಸಾಮರ್ಥ್ಯ ಸಂವರ್ಧನೆಯ ಮೂಲಕ ವಸ್ತುನಿಷ್ಠತೆಯ ಅರಿವನ್ನು ಮೂಡಿಸಲು ಸಹಕಾರಿಯಾಗಿ ಕರ್ನಾಟಕ ಸರ್ಕಾರವು ಮುಂದಿನ ಮೂರು ವರ್ಷಗಳಲ್ಲಿ ಪ್ರತಿ ಆರ್ಥಿಕ ವರ್ಷ 120 ಅಧಿಕಾರಿಗಳಂತೆ ಒಟ್ಟು 360 ಅಧಿಕಾರಿಗಳಿಗೆ ತರಬೇತಿ ನೀಡಲು ಅನುಮತಿಯನ್ನು ನೀಡಿರುತ್ತದೆ.

ಆರ್ಥಿಕ ದೃಷ್ಟಿಕೋನವನ್ನು ಬಲಗೊಳಿಸಲು ಮಾಡ್ಯೂಲ್ ಆಧಾರಿತ ಸಾಮರ್ಥ್ಯ ಸಂವರ್ಧನಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮತ್ತು ಇಲಾಖೆಯ ಅಧಿಕಾರಿಗಲ ಆಡಳಿತದ ಸಾಮರ್ಥ್ಯ ಹಾಗೂ ದಕ್ಷತೆಯನ್ನು ಹೆಚ್ಚಿಸಲು, ಐಐಎಂಬಿಯು ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ, ನಿರ್ವಹಿಸಲಿದೆ.

ಐಐಎಂಬಿ ತರಬೇತಿಯಲ್ಲಿ ಅಧಿಕಾರಿಗಳ ಒಂದು ಪ್ರಮುಖ ಕಲಿಕೆಯೆಂದರೆ ತೆರಿಗೆ ಆಡಳಿತದಲ್ಲಿ ದತ್ತಾಂಶ ವಿಶ್ಲೇಷಣೆ (Big Data Analytics) ಯ ಪ್ರಾಮುಖ್ಯತೆ.

ನಿಗದಿಪಡಿಸಿಕೊಂಡ ಉದ್ದೇಶಗಳನ್ನು ಸಾಧಿಸಲು ದತ್ತಾಂಶ ವಿಶ್ಲೇಷಣೆಯಲ್ಲಿನ ಐಐಎಂಬಿಯ ಪ್ರಾವೀಣ್ಯತೆ, ಎನ್‌ಐಸಿಯವರ ತಂತ್ರಾಂಶ ಕೌಶಲ್ಯ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಜ್ಞಾನದ ಸಹಭಾಗಿತ್ವವು ಸಹಕಾರಿಯಾಗಲಿದೆ. ಜಿಎಸ್‌ಟಿ ದತ್ತಾಂಶದ ಒಳನೋಟವನ್ನು ಹೊಂದಲು ಐಐಎಂಬಿಯ ಸಹಯೋಗದೊಂದಿಗೆ ದತ್ತಾಂಶ ವಿಶ್ಲೇಷಣೆಗಳನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರವು ಸಹ ಅನುಮತಿಯನ್ನು ವಾಣಿಜ್ಯ ತೆರಿಗೆಗಳ ಇಲಾಖೆಗೆ ನೀಡಿದೆ.

**ಒಡಂಬಡಿಕೆಗಳ ಬಗ್ಗೆ**

**ಮೊದಲ** ಒಡಂಬಡಿಕೆಯನ್ನು ಐಐಎಂಬಿಯ ಕಾರ್ಯನಿರ್ವಾಹಕ ಶೈಕ್ಷಣಿಕ ಕಾರ್ಯಕ್ರಮಗಳ ವಿಭಾಗ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಗಳ ಮಧ್ಯೆ ಸಹಿ ಮಾಡಲಾಗಿದ್ದು, ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳ ಸಾಮರ್ಥ್ಯ ಸಂವರ್ಧನಾ ಕಾರ್ಯಕ್ರಮಗಳ ಮೇಲೆ ಗಮನಹರಿಸಲಿದೆ. ಇದು ಆಡಳಿತಾತ್ಮಕ ಕೌಶಲ್ಯ, ದತ್ತಾಂಶ ವಿಶ್ಲೇಷಣೆ, ರಾಜಸ್ವದ ಅಂದಾಜಿಸುವಿಕೆ, ತನಿಖೆಗಳನ್ನು ಕೈಗೊಳ್ಳುವಿಕೆ, ಆರ್ಥಿಕ ದೃಷ್ಟಿಕೋನದ ಅಭಿವೃದ್ಧಿ ಹಾಗೂ ಇತರೇ ನಿರ್ಣಾಯಕ ಕ್ಷೇತ್ರಗಳ ಬಗ್ಗೆ ಗಮನಹರಿಸಲಿದ್ದು, ತೆರಿಗೆ ಆಡಳಿತವು ಮೌಲ್ಯವರ್ಧಿತ ತೆರಿಗೆಯಿಂದ ಜಿಎಸ್‌ಟಿಗೆ ಸ್ಥಿತ್ಯಂತರಗೊಳ್ಳುವ ಸಮಯದಲ್ಲಿ ಅಧಿಕಾರಿಗಳ ಆಡಳಿತ ಕೌಶಲ್ಯ ಹಾಗೂ ದಕ್ಷತೆಯನ್ನು ಹೆಚ್ಚಿಸಲು ಅನುಕೂಲವಾಗಲಿದೆ. ಪ್ರೊಫೆಸರ್ ಅರ್ಣಬ್ ಮುಖರ್ಜಿ ಮತ್ತು ಪ್ರೊಫೆಸರ್ ಅನಿಲ್ ಬಿ. ಸುರಾಜ್ ಇವರುಗಳು ಐಐಎಂಬಿಯ ಕಾರ್ಯಕ್ರಮ ನಿರ್ದೇಶಕರಾಗಿದ್ದು, ಈ ಇಬ್ಬರೂ ಸಾರ್ವಜನಿಕ ಕಾರ್ಯನೀತಿ ಕ್ಷೇತ್ರದಿಂದ ಬಂದವರಾಗಿರುತ್ತಾರೆ. ಅವಧಿಯು 3 ವರ್ಷಗಳಾಗಿದೆ.

ಒಡಂಬಡಿಕೆಯ ಪ್ರಸ್ತುತತೆಯನ್ನು ವಿವರಿಸುತ್ತಾ ಪ್ರೊಫೆಸರ್ ಅರ್ಣಬ್ ಮುಖರ್ಜಿಯವರು "ಜಿಎಸ್‌ಟಿಯು ವಾಣಿಜ್ಯ ತೆರಿಗೆ ಆಡಳಿತದಲ್ಲಿ ಒಂದು ಹೊಸ ಯುಗವಾಗಿದ್ದು, ಇದಕ್ಕೆ ಕ್ರಿಯಾತ್ಮಕ ಹಾಗೂ ಸಕಾರಾತ್ಮಕ ಆಡಳಿತ ನಡೆಸುವ ಅಧಿಕಾರಿಗಳ ಅಗತ್ಯತೆ ಇದ್ದು ಇದನ್ನು ಸರಿಯಾಗಿ ರೂಪಿಸಬೇಕಾಗಿದೆ. ತರಬೇತಿ ಒಡಂಬಡಿಕೆಯು ಉತ್ತಮ ಯೋಜನೆಗಳನ್ನು ಮತ್ತು ಅಭ್ಯಾಸಗಳನ್ನು ರೂಡಿಗೊಳಿಸುವುದಲ್ಲದೇ, ಎಂದಿಗೂ ಬದಲಾಗದ ತೆರಿಗೆ ಸಂಗ್ರಹಣೆ ಕಾರ್ಯವನ್ನು ನಿರ್ವಹಿಸಲು ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳಲ್ಲಿ ಧನಾತ್ಮಕ ಬದಲಾವಣೆಯನ್ನು ತರಲಿದೆ." ಎಂದು ಹೇಳಿದರು.

ಐಐಎಂಬಿಯೊಂದಿಗಿನ ಸಹಭಾಗಿತ್ವವನ್ನು ಮೆಚ್ಚುತ್ತಾ, ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯ ಆಯುಕ್ತರಾದ ಶ್ರೀ ಎಂ.ಎಸ್. ಶ್ರೀಕರ್ ರವರು "ಜಿಎಸ್‌ಟಿಯನ್ನು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಮುಂಚೂಣಿಗೆ ತರಲು ಅಧಿಕಾರಿಗಳನ್ನು ಸಜ್ಜುಗೊಳಿಸಲು ಒಂದು ಸಮರ್ಪಕವಾಗಿ ವಿನ್ಯಾಸಗೊಳಿಸಲಾದ ಸಮಗ್ರ ಸಾಮರ್ಥ್ಯ ಸಂವರ್ಧನಾ ಕಾರ್ಯಕ್ರಮದ ಅವಶ್ಯಕತೆ ಇದೆ. ಈ ರೀತಿಯ ಒಂದು ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಗೊಳಿಸಲು ನಾವು ಐಐಎಂಬಿಯೊಂದಿಗೆ ಮಾಡಿಕೊಂಡ ಸಹಭಾಗಿತ್ವವು 2018–19 ನೇ ಸಾಲಿನಲ್ಲಿ ಹೆಚ್ಚಿನ ಯಶಸ್ಸನ್ನು ಕಂಡಿದೆ. ಈ ಕಲಿಕೆಯ ಆಧಾರದ ಮೇಲೆ, ನಾವು ನಮ್ಮ ಹಿರಿಯ ಹಾಗೂ ಮಧ್ಯಮ ಶ್ರೇಣಿಯ ಅಧಿಕಾರಿಗಳಿಗೆ ಒಂದು ಸಮಗ್ರ ಜಿಎಸ್‌ಟಿ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳು ಐಐಎಂಬಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ನಾವು ಉತ್ಸುಕರಾಗಿದ್ದೇವೆ." ಎಂದು ಹೇಳಿದರು.

"ಜಿಎಸ್‌ಟಿ ಯುಗದಲ್ಲಿ, ತೆರಿಗೆ ಅಧಿಕಾರಿಯು ತೆರಿಗೆ ಕಾನೂನುಗಳನ್ನು ಅರ್ಥ ಮಾಡಿಕೊಳ್ಳುವುದು ಮಾತ್ರವಲ್ಲದೇ, ಅರ್ಥವ್ಯವಸ್ಥೆ ಹಾಗೂ ಸಮಾಜ ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಯಬೇಕಿದ್ದು, ತೆರಿಗೆ ಆಡಳಿತದೊಂದಿಗೆ ಹೊಸ ಕಾನೂನುಗಳ ಸಂಬಂಧಗಳನ್ನೂ ಸಹ ತಿಳಿಯಬೇಕಿದ್ದು, ವಾಣಿಜ್ಯ ತೆರಿಗೆಗಳ ಇಲಾಖೆಯೊಳಗಡೆ ನಾಯಕತ್ವದ ಪಾತ್ರವಹಿಸಬೇಕಾಗುತ್ತದೆ" ಎಂದು ಒಡಂಬಡಿಕೆಯ ಮುಖ್ಯಾಂಶಗಳನ್ನು ತಿಳಿಸುತ್ತಾ ಪ್ರೊಫೆಸರ್ ಅನಿಲ್ ಬಿ. ಸುರಾಜ್ ಇವರು ತಿಳಿಸಿದರು.

**ಎರಡನೇ** ಒಡಂಬಡಿಕೆಯನ್ನು ಐಐಎಂಬಿಯ ಪ್ರಧಾನ ತನಿಖಾಧಿಕಾರಿಗಳಾದ – ಪ್ರೊಫೆಸರ್ ಮಲಕ್ ಘೋಷ್, ಬೋಧಕರು (ನಿರ್ಧಾರ ವಿಜ್ಞಾನ) ಮತ್ತು ಪ್ರೊಫೆಸರ್ ಅರ್ನಾಬ್ ಮುಖರ್ಜಿ, ಬೋಧಕರು (ಸಾರ್ವಜನಿಕ ಕಾರ್ಯನೀತಿ ಕ್ಷೇತ್ರ) ಇವರುಗಳು ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಯ ನಡುವೆ ಸಹಿ ಮಾಡಲ್ಪಟ್ಟಿದೆ. ವಾಣಿಜ್ಯ ತೆರಿಗೆಗಳ ಇಲಾಖೆಯು ದತ್ತಾಂಶ ವಿಶ್ಲೇಷಣೆಯ ವಿವಿಧ ಆಯಾಮಗಳ ಬಗ್ಗೆ ಗಮನಹರಿಸಿ, ಅತ್ಯಾಧುನಿಕ ಕಲಿಕಾ ಕ್ರಮಗಳ ಮೂಲಕ ಬೇಕಾದ ಒಳನೋಟಗಳನ್ನು ಹೊಂದಲು ಹಾಗೂ ವಂಚನೆಯ ವಿಶ್ಲೇಷಣೆ, ಕ್ಷೇತ್ರೀಯ ಮಾದರಿಗಳು, ರಾಜಸ್ವ ಸಂಗ್ರಹಕ್ಕಾಗಿ ಹಾಟ್–ಸ್ಪಾಟ್ ಮ್ಯಾಪಿಂಗ್, ಆರ್ಥಿಕ ನೀತಿ ಹಾಗೂ ಜಿಎಸ್‌ಟಿ ತೆರಿಗೆ ಸಂಗ್ರಹಣೆಯ ಪರಿಣಾಮಗಳನ್ನು ಅರ್ಥೈಸಿಕೊಳ್ಳಲು ವಾಣಿಜ್ಯ ತೆರಿಗೆಗಳ ಇಲಾಖೆಯು ಈ ಬಗ್ಗೆ ಗಮನಹರಿಸಲಿದೆ. ಈ ಪ್ರಯತ್ನವು ಕರ್ನಾಟಕ ಸರ್ಕಾರದ ತೆರಿಗೆ ಆಡಳಿತಕ್ಕೆ ಇನ್ನೂ ಹೆಚ್ಚಿನ ಒಳನೋಟ ನೀಡಿ ಅರ್ಥೈಸಿಕೊಳ್ಳಲು ಸಹಕಾರಿಯಾಗಲಿದೆ. ಇದರ ಅವಧಿಯು 2 ವರ್ಷಗಳಾಗಿವೆ.

"ಪ್ರವೃತ್ತಿಗಳು, ಕ್ಷೇತ್ರೀಯ ಸವಾಲುಗಳನ್ನು ಗುರುತಿಸಲು ಬಿಗ್ ಡಾಟಾ ಯಂತ್ರ ಕಲಿಕೆಯ ಒಳನೋಟಗಳನ್ನು ಗಣನೀಯವಾಗಿ ಬಳಸಿಕೊಳ್ಳಲಾಗುತ್ತಿದೆ. ಇದು ಕಾರ್ಪೊರೇಟ್ ನೀತಿಗಳು ಮತ್ತು ಸರ್ಕಾರದ ನೀತಿಗಳ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಿಳುವಳಿಕೆ ನೀಡಲಿದೆ. ಜಿಎಸ್‌ಟಿ ದತ್ತಾಂಶದ ಸೂಕ್ಷ್ಮ ವಿಶ್ಲೇಷಣೆಯು ರಾಜಸ್ವ ಸಂಗ್ರಹವನ್ನು ಹೆಚ್ಚಿಸುವುದಲ್ಲದೇ, ನೀತಿಗಳ ಪ್ರಯೋಗಗಳನ್ನು ಗುರುತಿಸಲು ಸಹಕರಿಸಿ, ಸರ್ಕಾರದ ಗುರಿಗಳನ್ನು ಮುಟ್ಟಲು ಸಹಕಾರಿಯಾಗುತ್ತದೆ. ಐಐಎಂಬಿಯು ದತ್ತಾಂಶ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ವಾಣಿಜ್ಯ ತೆರಿಗೆಗಳ ಇಲಾಖೆಯೊಂದಿಗೆ ಈ ನಿಟ್ಟಿನಲ್ಲಿ ಸಹಭಾಗಿಯಾಗಲು ಸಂತೋಷವಾಗುತ್ತದೆ. ಇದು ಇಡೀ ದೇಶದಲ್ಲಿಯೇ

ಜಿಎಸ್‌ಟಿಯಡಿಯಲ್ಲಿ ಕೈಗೊಂಡ ಮೊಟ್ಟ ಮೊದಲ ಉಪಕ್ರಮವಾಗಿದೆ'' ಎಂದು ಪ್ರೊಫೆಸರ್ ಮುಲಕ್ ಘೋಷ್ ವಿವರಿಸಿದರು.

''ಜಿಎಸ್‌ಟಿ ಅಡಿಯಲ್ಲಿನ ತೆರಿಗೆ ಆಡಳಿತವು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಲು ಮತ್ತು ದಕ್ಷತೆ ಬಲಗೊಳ್ಳಲು ಹೊಸ ಕಲಿಕೆಗಳು, ಸಂಶೋಧನೆಗಳಿಂದ ಸಜ್ಜುಗೊಳ್ಳಬೇಕಿದೆ. ತೆರಿಗೆ ಆಡಳಿತವನ್ನು ಉತ್ತಮಗೊಳಿಸಲು ದತ್ತಾಂಶ ವಿಶ್ಲೇಷಣೆಯ ಸಂಭಾವ್ಯತೆಯನ್ನು ಅನ್ವೇಷಿಸಲು ವಾಣಿಜ್ಯ ತೆರಿಗೆಗಳ ಇಲಾಖೆಯು ಎನ್‌ಐಸಿಯ ತಾಂತ್ರಿಕ ಸಹಾಯದಿಂದ ಐಐಎಂಬಿಯೊಂದಿಗೆ ಸಹಭಾಗಿತ್ವವನ್ನು ಕೈಗೊಳ್ಳುತ್ತಿದೆ.'' ಎಂದು ವಾಣಿಜ್ಯ ತೆರಿಗೆಗಳ ಆಯುಕ್ತರಾದ ಶ್ರೀ ಎಂ.ಎಸ್. ಶ್ರೀಕರ್ ತಿಳಿಸಿದರು.

''ತೆರಿಗೆ ಆಡಳಿತ ಮತ್ತು ವಿತ್ತೀಯ ಕ್ಷೇತ್ರಗಳು ನಿಕಟವಾಗಿ ಹೆಣೆದುಕೊಂಡಿವೆ. ಜಿಎಸ್‌ಟಿ ಜಾಲದಲ್ಲಿನ ದತ್ತಾಂಶ ವಿಶ್ಲೇಷಣೆಯು ವಿತ್ತೀಯ ಕ್ಷೇತ್ರವನ್ನು ವೃದ್ಧಿಸುವ ಸಂಭವವನ್ನು ಹೊಂದಿರುವುದಲ್ಲದೇ, ತೆರಿಗೆ ಪದ್ಧತಿಯನ್ನು ಹೆಚ್ಚು ನಿಖರಗೊಳಿಸಲಿದೆ ಹಾಗೂ ಸರಳಗೊಳಿಸಲಿದೆ'' ಎಂದು ಪ್ರೊಫೆಸರ್ ಅರ್ನಾಬ್ ಮುಖರ್ಜಿಯವರು ಸೇರಿಸಿದರು.



''ಸಾಮರ್ಥ್ಯ ಸಂವರ್ಧನೆ'' ಮತ್ತು ''ದತ್ತಾಂಶ ವಿಶ್ಲೇಷಣೆ'' ಗೆ ಸಂಬಂಧಿಸಿದಂತೆ ಎರಡು ಒಡಂಬಡಿಕೆಗಳನ್ನು ಐಐಎಂಬಿ ಮತ್ತು ವಾಣಿಜ್ಯ ತೆರಿಗೆಗಳ ಇಲಾಖೆಯ ನಡುವೆ ಮಾಡಿಕೊಳ್ಳಲಾಯಿತು. ಶ್ರೀ ಎಂ.ಎಸ್.ಶ್ರೀಕರ್, ವಾಣಿಜ್ಯ ತೆರಿಗೆಗಳ ಆಯುಕ್ತರು, ಪ್ರೊಫೆಸರ್ ರಾಜಾರಂ.ಜಿ., ಮುಲಕ್ ಘೋಷ್, ಮುಖ್ಯ ತನಿಖಾದಿಕಾರಿ, ಅರ್ನಬ್ ಮುಖರ್ಜಿ, ಪ್ರೊಫೆಸರ್–ಐಐಎಂಬಿ ಮತ್ತು ಬಿ.ವಿ. ರವಿ, ಅಪರ ಆಯುಕ್ತರು ಇವರುಗಳನ್ನು ಚಿತ್ರದಲ್ಲಿ ಕಾಣಬಹುದು.

(ಆಯುಕ್ತರ ಆದೇಶದಂತೆ)

(ಬಿ.ವಿ. ರವಿ)
ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು
(ಕೇಂದ್ರ ಕಛೇರಿ–1), ಬೆಂಗಳೂರು